ರಾಯಚೂರಿಗೆ ಹೋಗುವ ರಸ್ತೆಯನ್ನು ಹೆದ್ದಾರಿ ಆಗಿ ಪರಿವರ್ತಿಸುವುದು

337-ಶ್ರೀ ಬಾಬುರಾವ್ ಚವ್ಹಾಣ್(ಶಹಾಬಾದ್): ಮಾನ್ಯ ಲೋಕೋಪಯೋಗಿ ಮಂತ್ರಿಯವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ?

ಅ) ಗುಲ್ಬರ್ಗಾದಿಂದ ಸಂದೂರ್ ಶಹಾಬಾದ್ ವಾಡಿ ನಾಲವಾರ, ಯಾದಗಿರಿ ಮಾರ್ಗವಾಗಿ ರಾಯಚೂರಿಗೆ ಹೋಗುವ ರಸ್ತೆಯನ್ನು ರಾಜ್ಯ ಹೆದ್ದಾರಿ ಆಗಿ ಪರಿವರ್ತಿಸಲಾಗುವುದೆ

ಆ) ಹಾಗಿದ್ದಲ್ಲಿ ಇದಕ್ಕೆ ಖರ್ಚಾಗುವ ಮೊತ್ತವೆಷ್ಟು?

ಇ) ಸರಕಾರವು ರಾಜ್ಯ ಹೆದ್ದಾರಿ ಆಗಿ ಪರಿವರ್ತಿಸುವುದಕ್ಕೆ ಯಾವುದಾದರೂ ಕ್ರಮ ತೆಗೆದುಕೊಂಡಿದೆಯೇ?

ಈ) ಇನ್ನು ಎಷ್ಟು ವರ್ಷದಲ್ಲಿ ಈ ಹೆದ್ದಾರಿಯನ್ನು ರಾಜ್ಯ ಹೆದ್ದಾರಿ ಆಗಿ ಪರಿವರ್ತಿಸಲಾಗುವುದೇ?

ಶ್ರೀ ಜಿ.ಹೆಚ್. ಆಶ್ವಥ್‌ರೆಡ್ಡಿ(ಲೋಕೋಪಯೋಗಿ ಮಂತ್ರಿಯವರು):

ಗುಲ್ಬರ್ಗಾ-ಸಂದೂರ್-ಶಹಬಾದ್-ವಾಡಿ-ಯಾದಗೀರ್-ರಾಯಚೂರು ರಸ್ತೆಯನ್ನು ರಾಜ್ಯ ಹೆದ್ದಾರಿಯಾಗಿ ಮೇಲ್ದರ್ಜೆಗೆ ಏರಿಸುವ ವಿಷಯವು ಸರ್ಕಾರದ ಪರಿಶೀಲನೆಯಲ್ಲಿದೆ.

ಆ) ಈ ರಸ್ತೆಯನ್ನು ರಾಜ್ಯ ಹೆದ್ದಾರಿ ಮಟ್ಟದಲ್ಲಿ ಅಭಿವೃದ್ಧಿ ಪಡಿಸಲು ಸುಮಾರು 600 ಲಕ್ಷ ರೂ. ಗಳ ಅಂದಾಜು ಆಗುತ್ತದೆ.

ಸದ್ಯದಲ್ಲಿ ಈ ರಸ್ತೆಯ ಸುಧಾರಣೆಯನ್ನು 315.75 ಲಕ್ಷ ರೂ.ಗಳ ಅಂದಾಜಿನಲ್ಲಿ ಹೈದರಬಾದ್ ಕರ್ನಾಟಕ ಅಭಿವೃದ್ಧಿ ಯೋಜನೆಯಡಿಯಲ್ಲಿ ತೆಗೆದುಕೊಳ್ಳಲಾಗಿದೆ ಹಾಗೂ ಕಾಮಗಾರಿಗಳು ಪ್ರಗತಿಯಲ್ಲಿದೆ.

ಇ) ವಿಷಯವು ಸರ್ಕಾರದ ಪರಿಶೀಲನೆಯಲ್ಲಿದೆ.

ಈ) ಶೀಘ್ರದಲ್ಲಿ ತೀರ್ಮಾನಿಸಲಾಗುವುದು.

ರಾಜ್ಯದಲ್ಲಿ ಪ್ರಗತಿಯಲ್ಲಿರುವ ನೀರಾವರಿ ಯೋಜನೆಗಳ ಸಂಖ್ಯೆ

299-ಶ್ರೀ ಸಾದತ್ ಅಲಿ ಖಾನ್ (ಚನ್ನಪಟ್ಟಣ): ಮಾನ್ಯ ಭಾರಿ ಮತ್ತು ಮಧ್ಯಮ ನೀರಾವರಿ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ?

ಅ) ರಾಜ್ಯದಲ್ಲಿ ಪ್ರಗತಿಯಲ್ಲಿರುವ ನೀರಾವರಿ ಯೋಜನೆಗಳ ಸಂಖ್ಯೆ ಎಷ್ಟು?

ಆ) ಈ ಪೈಕಿ ಪೂರ್ಣವಾದ ಮತ್ತು ಅಪೂರ್ಣವಾದ ಯೋಜನೆಗಳು ಯಾವುವು?

ಇ) ಈ ಯೋಜನೆಗಳನ್ನು ಪೂರ್ಣಗೊಳಿಸಲು ಸರ್ಕಾರವು ಕಾಲ ಮಿತಿಯನ್ನು ನಿಗದಿಪಡಿಸಿದೆಯೇ ಮತ್ತು ಈ ಯೋಜನೆಗಳು ಪೂರ್ಣವಾದ ನಂತರ ಒಟ್ಟು ಎಷ್ಟು ಹೆಕ್ಟೇರು ಭೂಮಿಯು ನೀರಾವರಿ ಸೌಲಭ್ಯಕ್ಕೆ ಒಳಪಡುವುದು?

ಈ) ಈ ಯೋಜನೆಗಳಿಂದ ಉಂಟಾದ ರಾಜ್ಯದಲ್ಲಿನ ನೀರಾವರಿ ಅಭಿವೃದ್ಧಿಯ ಶೇಕಡಾವಾರು?

ಶ್ರೀ ಮಲ್ಲಾರಿಗೌಡ ಪಾಟೀಲ್ (ಭಾರಿ ಮತ್ತು ಮಧ್ಯಮ ನೀರಾವರಿ ಮಂತ್ರಿಗಳು):

ಅ) ಭಾರಿ ಯೋಜನೆಗಳು 18
ಮಧ್ಯಮ ಯೋಜನೆಗಳು 17
ಒಟ್ಟು 35

ಆ) ಎಲ್ಲಾ 35 ಯೋಜನೆಗಳೂ ಪ್ರಗತಿಯಲ್ಲಿದ್ದು ಯಾವುವೂ ಪೂರ್ಣಗೊಂಡಿಲ್ಲ.

ಇ) ಹೌದು.